# ಭಕ್ತಿಯ ಪಸೆ, ಒಂಟೆ ಪರಿಷೆ



ನ. 15ರಿಂದ 23ರವರೆಗೆ 'ಪುಷ್ಕರ ಮೇಳ'

■ ಸುಬ್ಬರಾವ್ ಎನ್.ಕೆ.



ರಾಜಸ್ಥಾನ, ರಾಜವಂಶಗಳ ಗತಕಾಲದ ವೈಭವಗಳನ್ನು ಇಂದಿಗೂ ಜತನ ಮಾಡಿಕೊಂಡು ಬಂದಿರುವ ಅಪರೂಪದ ಪ್ರವಾಸಿ ತಾಣಗಳ ರಾಜ್ಯ. ಸುಂದರವಾದ ಕೋಟೆಗಳು, ರಾಜವಾಡೆಗಳು, ದೇವಸ್ಥಾನಗಳು ಮತ್ತು ಮರಳುಗಾಡು – ಇವೆಲ್ಲಾ ಪ್ರವಾಸಿಗರಿಗೆ ಅನನ್ಯ ಅನುಭವ ನೀಡುವ ಸ್ಥಳಗಳು.

ಇಲ್ಲಿರುವ ಶ್ರದ್ಧಾಕೇಂದ್ರಗಳಲ್ಲಿ ಪುಷ್ಕರ ಕೂಡ ಒಂದು. ಅಜ್ಮೇರ್ ನಗರದಿಂದ 14 ಕಿ.ಮೀ. ಅಂತರದಲ್ಲಿರುವ ಈ ಪಟ್ಟಣವು 500ಕ್ಕೂ ಅಧಿಕ ದೇವಸ್ಥಾನಗಳನ್ನು ಮತ್ತು 52 ಘಾಟ್‌ಗಳನ್ನು ಹೊಂದಿದೆ. ಪುಷ್ಕರದಲ್ಲಿರುವ ಬ್ರಹ್ಮ ದೇವಸ್ಥಾನವು, ಸಂಪೂರ್ಣವಾಗಿ ಬ್ರಹ್ಮ ದೇವರಿಗೆ ಅರ್ಪಿತವಾದುದು. ಇಡೀ ಭಾರತದಲ್ಲಿ ಕಾಣಸಿಗುವ ಕೆಲವೇ ಕೆಲವು